# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1200
ಉತ್ತರಿಸಬೇಕಾದ ದಿನಾಂಕ : 15.12.2023
ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿ,

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಎಂ.ಚಿನ್ನಸ್ವಾಮಿ ಸ್ಟೇಡಿಯಂ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳ ಸಂಖ್ಯೆ ಎಷ್ಟು: ವಿವಿಧ ವಿಭಾಗ/ವರ್ಗ / ಸಾಲುಗಳಿಗೆ ನಿಗದಿಪಡಿಸಿದ ದರ ಎಷ್ಟು: ಸಾರ್ವಜನಿಕರಿಗೆ ಟಿಕೆಟ್ ಮಾರಾಟ ಮಾಡಿರುವುದರಿಂದ ಬಂದ ಹಣ ಎಷ್ಟು: ಹಾಗಿದ್ದಲ್ಲಿ. ಗೌರವ-ಪೂರ್ವಕವಾಗಿ ಸಾರ್ವಜನಿಕರಿಗೆ/ಹಿರಿಯ ನಾಗರೀಕರಿಗೆ/ಕ್ರಿಕೆಟ್ ಆಟಗಾರರಿಗೆ/ಕೆ.ಎಸ್.ಸಿ.ಎ. ಸಂಸ್ಥೆಯ ಆಡಳಿತ ಮಂಡಳಿ ಮತ್ತು ಆಡಳಿತ ಮಂಡಳಿಯ ಸದಸ್ಯರುಗಳಿಗೆ/ ಮಾನ್ಯ ಶಾಸಕರುಗಳಿಗೆ ಹಾಗೂ ಇತರರುಗಳಿಗೆ ಹಂಚಿಕೆ ಮಾಡಿರುವ ಟಿಕೆಟ್‌ಗಳ ಸಂಖ್ಯೆ ಎಷ್ಟು: ಕ್ರಿಕೆಟ್ ಪಂದ್ಯಾವಳಿವಾರು ವಿವರ ನೀಡುವುದು: | ಕಳೆದ 3 ವರ್ಷಗಳಲ್ಲಿ ಎಂ.ಚಿನ್ನಸ್ವಾಮಿ ಸ್ಟೇಡಿಯಂ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಕ್ರೀಡೆ ಪಂದ್ಯಾವಳಿಗಳ ಸಂಖ್ಯೆಯ ವಿವರ ವಿವಿಧ ವಿಭಾಗ/ವರ್ಗ/ಸಾಲುಗಳಿಗೆ ನಿಗದಿಪಡಿಸಿದ ಟಿಕೆಟ್‌ದರಗಳ ವಿವರ ಅನುಬಂಧ-01 ರಲ್ಲಿ ನೀಡಲಾಗಿದೆ.<br><br>ರಾಷ್ಟ್ರೀಯ ದೇಶಿಯ ಪಂದ್ಯಾವಳಿಗಳಿಗೆ ಯಾವುದೇ ಟಿಕೆಟ್/ಶುಲ್ಕ ನಿಗಧಿಪಡಿಸಿರುವುದಿಲ್ಲ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯವರು ತಿಳಿಸಿರುತ್ತಾರೆ.<br><br>ಅಂತರರಾಷ್ಟ್ರೀಯ ವಿಶ್ವ ಕಪ್ ಪಂದ್ಯಾವಳಿಗಳ ಟಿಕೆಟ್ ಶುಲ್ಕವನ್ನು ಬಿ.ಸಿ.ಸಿ.ಐ. ಆಡಳಿತ ಮಂಡಳಿಯು ನಿಗದಿಪಡಿಸಿರುತ್ತದೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯವರು ತಿಳಿಸಿರುತ್ತಾರೆ.<br><br>2021-22ರ ಸಾಲಿನ ಆಡಿಟ್ ವರದಿ ಪ್ರಕಾರ ಟಿಕೆಟ್ ಮಾರಾಟ ಮಾಡಿರುವುದರಿಂದ ಬಂದ ಹಣ ರೂ.8,00,74,492/- (ಇಂಡಿಯಾ ಮತ್ತು ಶ್ರೀಲಂಕಾ ನಡುವೆ ದಿನಾಂಕ:12.03.2022 ರಿಂದ 14.03.2022 ರವರೆಗೆ ನಡೆದ ಪಿಂಕ್ ಬಾಲ್ ಸೆಕೆಂಡ್ ಟೆಸ್ಟ್ ಮ್ಯಾಚ್) ಪ್ರತಿ ಅನುಬಂಧ-2 ರಲ್ಲಿ ನೀಡಲಾಗಿದೆ.<br><br>ಸರ್ಕಾರದ ಎಕ್ಸಿಕ್ಯೂಟಿವ್ ಮಾನ್ಯ ವಿಧಾನಸಭಾ ಸದಸ್ಯರುಗಳಿಗೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಮತ್ತು ಮಾನ್ಯ ನ್ಯಾಯಾಧೀಶರಿಗೆ (Honourable Judiciary) ಪಂದ್ಯಾವಳಿಯು ವೀಕ್ಷಣೆಗೆ/ಸಮಾರಂಭಕ್ಕೆ ಅತಿಥಿಗಳನ್ನಾಗಿ ಕೆ.ಎಸ್.ಸಿ.ಎಸ್ ಸಂಸ್ಥೆಯ ವತಿಯಿಂದ ಆಹ್ವಾನಿಸಲಾಗುವುದಾಗಿ ಸಂಸ್ಥೆಯವರು ತಿಳಿಸಿರುತ್ತಾರೆ. |
| ಆ) | ಕಳೆದ 3 ವರ್ಷಗಳಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯವರಿಂದ ವಾರ್ಷಿಕ ಆಡಿಟ್ ವರದಿಯನ್ನು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಲಾಗಿದೆಯೇ: | ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯವರು ಸಲ್ಲಿಸಿರುವ ಕಳೆದ ಮೂರು ವರ್ಷಗಳ 2020-21, 2021-22 ಮತ್ತು |

| | | |
|---|---|---|
| | ಹಾಗಿದ್ದಲ್ಲಿ, 3 ವರ್ಷಗಳ ವಾರ್ಷಿಕ ಆಡಿಟ್ ವರದಿ ಸಂಪೂರ್ಣ ವಿವರದೊಂದಿಗೆ ಸಲ್ಲಿಸುವುದು: | 2022-23ರ ಸಾಲಿನ ಆಡಿಟ್ ವರದಿಗಳನ್ನು ಕ್ರಮವಾಗಿ ಅನುಬಂಧ-03, 04 ಮತ್ತು 05 ರಲ್ಲಿ ಇರಿಸಿದೆ. |
| ಇ) | ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು "ಬೈಲಾ" ವನ್ನು ಹೊಂದಿದೆಯೇ: ಅದನ್ನು ಜಾಲತಾಣ (ವೆಬ್ ಸೈಟ್)ನಲ್ಲಿ ಪ್ರಕಟಿಸಲಾಗಿದೆಯೇ: ಕನ್ನಡ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಲಾಗಿದೆಯೇ: ಹಾಗಿದ್ದಲ್ಲಿ, ಪ್ರಕಟಿಸಲಾದ ಮಾಧ್ಯಮದ ಪ್ರತಿಯೊಂದಿಗೆ ವಿವರವನ್ನು ಸಲ್ಲಿಸುವುದು? | ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಬೈಲ್ ಆಂಗ್ಲ ಭಾಷೆಯಲ್ಲಿರುತ್ತದೆ ಹಾಗೂ ರಾಜ್ಯ ಕ್ರಿಕೆಟ್ ಸಂಸ್ಥೆಯ ಬೈಲಾ ವೆಬ್ ಸೈಟ್ www.kaca.cricket.com ರಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಸಿರುತ್ತಾರೆ. ಬೈಲಾ ಪ್ರತಿಯನ್ನು ಕ್ರಮವಾಗಿ ಅನುಬಂಧ-06ರಲ್ಲಿ ಇರಿಸಿದೆ. |

**ಸಂಖ್ಯೆ: ವೈಎಸ್‌ಡಿ-ಇಬಿಬಿ/92/2023**

(ಸಿದ್ದರಾಮಯ್ಯ)
ಮುಖ್ಯಮಂತ್ರಿ